## ನಮ್ಮ ವಿಜ್ಞಾನಿಗಳ ಬಗೆ ಹೀಗೆ!

ತಾನು ಕಂಡು ಹಿಡಿದ ಅನೇಕ ವೈಜ್ಞಾನಿಕ ಸತ್ಯಗಳನ್ನು ತನ್ನ ಹೆಸರಿಗೆ ಹಕ್ಕು ಸ್ವಾಮ್ಯ ಪಡೆಯದೆ ಇತರರಿಗೆ ಉದಾರವಾಗಿ ನೀಡಿದ ಮೇಧಾವಿ ವಿಜ್ಞಾನಿ ಜಗದೀಶ್ ಚಂದ್ರ ಬೋಸ್ ಭೌತಶಾಸ್ತ್ರ ಮತ್ತು ಸಸ್ಯಶಾಸ್ತ್ರ ಎರಡರಲ್ಲೂ ಮಹತ್ತರ ಕೆಲಸ ಮಾಡಿದ್ದರು. ವಿದೇಶದ ವೈರ್‌ಲೆಸ್ ಉದ್ಯಮ ನಡೆಸುವ ಕಂಪನಿಯೊಂದು ಅತಿ ಹೆಚ್ಚಿನ ಹಣದ ಆಮಿಷ ಒಡ್ಡಿದ್ದರೂ ಅದನ್ನು ತಿರಸ್ಕರಿಸಿ 'ಜ್ಞಾನವೇನಿದ್ದರೂ ಎಲ್ಲರಿಗೂ ಉಚಿತವಾಗಿ ಸಿಗಬೇಕು' ಎಂದು ಪ್ರತಿಪಾದಿಸಿದರು. ಯಾವಾಗ ಬೋಸ್ ಕತ್ತಲಿನಲ್ಲೂ ವಸ್ತುಗಳನ್ನು ಗುರುತಿಸುವ ಇನಾಫ್ರಾರೆಡ್ ಡಿಟೆಕ್ಟರ್‌ನ್ನು ಕಂಡುಹಿಡಿದರೋ, ಸಿಸ್ಟರ್ ನಿವೇದಿತಾ ಬೋಸ್‌ರನ್ನು ದೇಶಪ್ರೇಮದ ಹೆಸರಿನಲ್ಲಿ – 'ನೀವು ಪೇಟೆಂಟ್ ಪಡೆದರೆ,



ಜಗದೀಶ್ ಚಂದ್ರ ಬೋಸ್

ಭಾರತದ ಹೆಸರು ವಿಶ್ವಮಾನ್ಯವಾಗುತ್ತದೆ' ಎಂದು ಹುರಿದುಂಬಿಸಿದರು. ಆಗ ಒಲ್ಲದ ಮನಸ್ಸಿನಿಂದ 1904ರಲ್ಲಿ ಅಮೆರಿಕದಿಂದ ಪೇಟೆಂಟ್ ಪಡೆದು, ಹಾಗೆ ಪೇಟೆಂಟ್ ಪಡೆದ ಮೊದಲ ಭಾರತೀಯನೆನಿಸಿದರು.

ರಸಾಯನ ಶಾಸ್ತ್ರದಲ್ಲಿ ಭಾರೀ ಸಂಶೋಧನೆ ಮಾಡಿ ಭಾರತದಲ್ಲಿ ಮೊದಲ ರಸಾಯನ ವಿಜ್ಞಾನ ಮತ್ತು ಔಷಧ ವಿಜ್ಞಾನ ಕಾರ್ಖಾನೆಯನ್ನು ಸ್ಥಾಪಿಸಿದ ಕೀರ್ತಿ ವಿಜ್ಞಾನಿ ಪ್ರಫುಲ್ಲ ಚಂದ್ರ ರೇ ಅವರಿಗೆ ಸಲ್ಲುತ್ತದೆ. ಲಂಡನ್‌ನ ರಾಯಲ್ ಸೊಸೈಟಿ ಆಫ್ ಕೆಮಿಸ್ಟ್ರಿಯಿಂದ ಜೀವಮಾನ ಸಾಧನೆಗಾಗಿ ಪ್ರಪ್ರಥಮ 'ಕೆಮಿಕಲ್ ಲ್ಯಾಂಡ್‌ಮಾರ್ಕ್ ಪ್ಲೇಕ್' ಪ್ರಶಸ್ತಿ ಪಡೆದ ಹೊರದೇಶೀಯ ಎಂಬ ಖ್ಯಾತಿಗಳಿಸಿದ ರೇ, ತಮ್ಮ ಜೀವನದುದ್ದಕ್ಕೂ ಗಳಿಸಿದ ಹಣವನ್ನು ವಿಜ್ಞಾನ–ಶಿಕ್ಷಣ ಸಂಸ್ಥೆಗಳಿಗೆ ದಾನ ಮಾಡಿದರು.

## ಅಲ್ಬರೂನಿಯ ಅಹರ್ನಿಶಿ ಆಸಕ್ತಿ

ಭಾರತದ ಬಗ್ಗೆ ಅದ್ಭುತ ಗ್ರಂಥ 'ಕಿತಬುಲ್ ಹಿಂದ್' ರಚಿಸಿದ್ದ ಹನ್ನೊಂದನೇ ಶತಮಾನದ ಖ್ಯಾತ ಅರೇಬಿಯನ್ ಗಣಿತಜ್ಞ ಅಲ್ಬರೂನಿ ಕಾಯಿಲೆಯಿಂದ ಹಾಸಿಗೆ ಹಿಡಿದು ಕೊನೆಯ ದಿನ ಎಣಿಸುತ್ತಿದ್ದರು. ಆಗ ಅವರ ಆರೋಗ್ಯ ವಿಚಾರಿಸಲು ಬಂದ ಸ್ನೇಹಿತನನ್ನುದ್ದೇಶಿಸಿ, 'ನಾನು ನಿನಗೆ ವಹಿಸಿದ್ದೆನಲ್ಲ, ಆ ಸಮಸ್ಯೆಗೆ ಪರಿಹಾರ ದೊರೆಯಿತೆ?' ಎಂದರು. 'ಹೌದು, ಆ ಸಂತಸದ ಸುದ್ದಿಯನ್ನು ನಿಮಗೆ ತಿಳಿಸಲೆಂದೇ ನಾನಿಲ್ಲಿಗೆ ಬಂದದ್ದು' ಎನ್ನುತ್ತಾರೆ. ಹಾಗಾದರೆ ನಾನಿನ್ನು ನಿಶ್ಚಿಂತನಾಗಿ ಸಾಯುತ್ತೇನೆ ಎಂದು ಆ ಕ್ಷಣವೇ ಕಣ್ಣುಮುಚ್ಚಿ ಇಹಲೋಕ ತ್ಯಜಿಸಿದರಂತೆ. ಅಂತರರಾಷ್ಟ್ರೀಯ ಅಂತರಿಕ್ಷ ಒಕ್ಕೂಟ ಚಂದ್ರನ ಒಂದು ಕುಳಿಗೆ ಅಲ್ಬರೂನಿಯ ಹೆಸರಿಟ್ಟು ಗೌರವ ಸಲ್ಲಿಸಿದೆ.

## ವಾಲ್ಟರ್‌ನ ಬಹುಮಾನ ಮೋಹ

ಜರ್ಮನಿಯ ನೊಬೆಲ್ ವಿಜ್ಞಾನಿ ವಾಲ್ಟರ್ ನೆರ್ನ್‌ಸ್ಟ್ ತನಗೆ ಸಿಕ್ಕ ಬಹುಮಾನ ಬಿರುದುಗಳ ಕುರಿತು ಭಾರೀ ಮೋಹ ಬೆಳೆಸಿಕೊಂಡಿದ್ದ. ಜರ್ಮನ್ ವಿ.ವಿ.ಯಲ್ಲಿ ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತಿದ ನೆರ್ನ್‌ಸ್ಟ್ ಪ್ರತೀ ದಿನ ತರಗತಿಗೆ ಹೋಗುವಾಗ ತನ್ನ ಲ್ಯಾಬ್ ಅಸಿಸ್ಟೆಂಟ್‌ನನ್ನೂ ಜೊತೆಗೆ ಕರೆದೊಯ್ಯುತ್ತಿದ್ದ. ಪ್ರತಿ ಶೈಕ್ಷಣಿಕ ತರಗತಿಯ ಪ್ರಾರಂಭದಂದು ಆತನ ಅಸಿಸ್ಟೆಂಟ್, ವಿಜ್ಞಾನಿಗೆ ಸಿಕ್ಕ ಎಲ್ಲ ಬಹುಮಾನ–ಪ್ರಶಸ್ತಿ ಪತ್ರಗಳನ್ನು ಟ್ರೇನಲ್ಲಿರಿಸಿಕೊಂಡು ತರಗತಿಗೆ ತಂದು ಪೋಡಿಯಂ ಮೇಲೆ ಎಲ್ಲರಿಗೂ ಕಾಣುವಂತೆ ಇರಿಸುತ್ತಿದ್ದ. ಶಾಲಾ ಮಗುವಿನಂತೆ ಸಂಭ್ರಮಿಸುತ್ತಿದ್ದ ನೆರ್ನ್‌ಸ್ಟ್ ಒಂದೊಂದೇ ಪ್ರಶಸ್ತಿಯನ್ನು ತೋರಿಸುತ್ತಾ ಅದು ಯಾವಾಗ ಯಾವ ವಿಷಯಕ್ಕೆ ಬಂತು ಎಂದು ಸವಿವರವಾಗಿ ಹೇಳುತ್ತಿದ್ದನಂತೆ.

## ನೊಬೆಲ್‌ಗೆ 81 ಸಲ ನಾಮಕರಣ

ಅಣು ಮತ್ತು ತಾತ್ವಿಕ ಭೌತಶಾಸ್ತ್ರದಲ್ಲಿ ಗಣನೀಯ ಸಂಶೋಧನೆ ಮಾಡಿದವರಲ್ಲಿ ಜರ್ಮನಿಯ ಅರ್ನಾಲ್ಡ್ ಸಾಮರ್‌ಫೀಲ್ಡ್ ಸಹ ಒಬ್ಬರು. ಅವರು ಗೈಡ್ ಮಾಡಿದ ಏಳು ಜನ ವಿದ್ಯಾರ್ಥಿಗಳಿಗೆ ನೊಬೆಲ್ ಬಹುಮಾನ ಸಿಕ್ಕಿರುವುದು ಇದುವರೆಗಿನ ಮುರಿಯದ ದಾಖಲೆ ಎನಿಸಿದೆ. 1917ರಿಂದ 1950ರ ಅವಧಿಯಲ್ಲಿ ಅರ್ನಾಲ್ಡ್‌ರ ಹೆಸರು ನೊಬೆಲ್ ಬಹುಮಾನ ಸಮಿತಿಯ ಮುಂದೆ 81 ಸಲ ನಾಮಕರಣಗೊಂಡಿತ್ತು. ಆಶ್ಚರ್ಯವೆಂದರೆ ಅವರಿಗೆ ನೊಬೆಲ್ ಬಹುಮಾನ ದೊರಕಲೇ ಇಲ್ಲ!

## ನೀಲ್ಸ್ ಬೋರ್ ಮತ್ತು ಫುಟ್‌ಬಾಲ್ ಗೋಲ್

ಕ್ವಾಂಟಂ ವಿಜ್ಞಾನ ಮತ್ತು ಅಣುವಿನ ಸಂರಚನೆಯ ಕುರಿತು ಮಹತ್ವಪೂರ್ಣ ಕೆಲಸ ಮಾಡಿದ್ದ ಡೆನ್‌ಮಾರ್ಕ್‌ನ ನೀಲ್ಸ್ ಬೋರ್, ತನ್ನ ಅಣ್ಣ ಹರಾಲ್ಡ್‌ನಂತೆ ಅದ್ಭುತ ಫುಟ್‌ಬಾಲ್ ಆಟಗಾರನಾಗಿದ್ದ. ಇಬ್ಬರೂ ಜೊತೆಯಾಗಿ ಅಕಾಡೆಮಿಸ್ಕ್ ಬೋಲ್ಡ್ ಕ್ಲಬ್ ಪರವಾಗಿ ಪಂದ್ಯಗಳನ್ನಾಡುತ್ತಿದ್ದರು. ಬೋರ್ ಗೋಲ್ ಕೀಪರ್ ಆಗಿರುತ್ತಿದ್ದ.

ಒಮ್ಮೆ ಜರ್ಮನಿಯ ಮಿಟ್‌ವೇಡಾ ಕ್ಲಬ್ ವಿರುದ್ಧ ಪಂದ್ಯ ನಡೆಯುತ್ತಿತ್ತು. ಜರ್ಮನ್ ಆಟಗಾರ ದೂರದಿಂದ ಒದೆದ ಚೆಂಡು ನೇರ ಬೋರ್‌ನ ಗೋಲ್ ಪೋಸ್ಟ್ ದಾಟಿ ಗೋಲಾಗಿತ್ತು. ತಡೆಯುವ ಎಲ್ಲ ಅವಕಾಶವಿದ್ದರೂ ಬೋರ್ ನಿಶ್ಚಲನಾಗಿ ನಿಂತು ಚೆಂಡು ಕಾಲಬುಡದಲ್ಲಿ ಪಾಸ್ ಆಗುವುದನ್ನು ನೋಡುತ್ತ ನಿಂತಿದ್ದನಂತೆ. 'ಏಕೆ ಹೇಗೆ ಮಾಡಿದೆ?' ಎಂದು ಕ್ಯಾಪ್ಟನ್ ವಿಚಾರಿಸಿದಾಗ, 'ಫಿಸಿಕ್ಸ್‌ನ ಸಮಸ್ಯೆಯೊಂದರ ಕುರಿತು ಯೋಚಿಸುತ್ತಿದ್ದೆ, ಏನೋ ಉತ್ತರ ಹೊಳೆದಂತಾಯಿತು, ಚೆಂಡು ತಡೆಯುವುದಕ್ಕಿಂತ ನನ್ನ ಸಮಸ್ಯೆಗೆ ಪರಿಹಾರ ಮುಖ್ಯ' ಎಂದುಕೊಂಡು ಚೆಂಡನ್ನು ತಡೆಯಲಿಲ್ಲ ಎಂದನಂತೆ. ನಂತರದ ದಿನಗಳಲ್ಲಿ ನೀಲ್‌ನನ್ನು ಕ್ಲಬ್ ತಂಡದಿಂದ ಡ್ರಾಪ್ ಮಾಡಲಾಯಿತು. ಉತ್ತಮ ಆಟವಾಡಿದ ಹರಾಲ್ಡ್ ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾದ.

## ಅಲನ್ ಟುರಿಂಗ್‌ನ ಒಗಟು

ನಾವೀಗ ಮಾತನಾಡುತ್ತಿರುವ 'ಕೃತಕ ಬುದ್ಧಿಮತ್ತೆ'ಗೆ ಬುನಾದಿ ಹಾಕಿದವನು ಇಂಗ್ಲೆಂಡಿನ ಅಲನ್ ಟುರಿಂಗ್. ಈಗಲೂ ಸಹ ಬುದ್ಧಿಮತ್ತೆಯ ಕುರಿತು ತಯಾರಾಗುವ ಸಲಕರಣೆಗಳೆಲ್ಲ 'ಟುರಿಂಗ್ ಟೆಸ್ಟ್' ಅನ್ನು ಪಾಸು ಮಾಡಲೇಬೇಕು.

ಆದರೆ ಸಲಿಂಗ ಕಾಮಿಯಾಗಿದ್ದ ಈತನ ಜೀವನ ವಿಧಾನವನ್ನು ಸಹಿಸದ ಬ್ರಿಟನ್‌ನ ರಾಣಿ ಆತನಿಗೆ ನೀಡಲಾಗಿದ್ದ ಭದ್ರತೆಯನ್ನು ಹಿಂತೆಗೆದುಕೊಂಡು ಆತನ ಮೇಲೆ ಮೊಕದ್ದಮೆ ಹೂಡಿ ವಿಚಾರಣೆಗೆ ಗುರಿಪಡಿಸಿ ಮಾನಸಿಕ ಹಿಂಸೆ ನೀಡಿದರು. ಅದರಿಂದ ನೊಂದ ಟುರಿಂಗ್ ಆತ್ಮಹತ್ಯೆಗೆ ಶರಣಾದ. ಈಗ್ಗೆ ಏಳು ವರ್ಷಗಳ ಹಿಂದೆ 'ಅರಮನೆ ಆತನನ್ನು ಕ್ಷಮಿಸಿದೆ' ಎಂದು ಅಧಿಕೃತ ಪ್ರಕಟಣೆ ನೀಡಿತು. ಆದರೆ ವಿಜ್ಞಾನ ರಂಗ ದೊಡ್ಡ ಮೇಧಾವಿಯನ್ನು ಕಳೆದುಕೊಂಡಿತು.